**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ;-** ಶ್ರೀ ಎ.ಸಿ.ಆರ್ ವಕೀಲರಿಂದ ಎದುರುದಾರರ ಪರವಾಗಿ

3. ನನ್ನ ಸ್ವಂತ ಊರು ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ ಇರುತ್ತದೆ. ನಾನು ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ತಾಯಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ನಾನು 8 ನೇ ವಯಸ್ಸಿನವನಿದ್ದಾಗ ತೀರಿಕೊಂಡಿರುತ್ತಾರೆ ಹಾಗೂ ನನ್ನ ತಂದೆ 2009 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಸರ್ಕಾರಿ ನೌಕರನಾರಿದ್ದು, ಅವರು ತೀರಿಕೊಂಡ ಮೇಲೆ ನನಗೆ ಅನುಕಂಪದ ಆಧಾರದ ಮೇಲೆ ನೌಕರಿ ಸಿಕ್ಕಿರುತ್ತದೆ ಎಂದರೆ ಸರಿ. ನನ್ನ ತಂದೆ ಕೆ.ಆರ್.ಪೇಟೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಸ್.ಡಿ.ಎ ಆಗಿ ಕೆಲಸ ಮಾಡುತ್ತಿದ್ದರು. ಎದುರುದಾರರು ಸದರಿ ಕಾಲೇಜಿನಲ್ಲಿ ಅಸಿಸ್ಟಂಟ್ ಫ್ರೊಫೆಸರ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದರು. ಅವರು ಬಿ.ಇ., ಎಂ.ಟೆಕ್ ಹಾಗೂ ಪಿ.ಹೆಚ್.ಡಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕ 29.11.2011 ರಂದು ನಾವಿಬ್ಬರು ಪರಸ್ಪರ ಒಪ್ಪಿ ಮದುವೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಂತರ ನಾವಿಬ್ಬರೂ ಹಾವೇರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರೆ ಸರಿ. ನಮ್ಮಿಬ್ಬರಿಗೂ ದಿನಾಂಕ 01.03.2014 ರಂದು ಗಂಡು ಮಗು ಜನಿಸಿರುತ್ತದೆ ಎಂದರೆ ಸರಿ. ನಮ್ಮಿಬ್ಬರದ್ದು ಅಂತರ ಜಾತಿ ವಿವಾಹ ಆಗಿರುತ್ತದೆ ಎಂದರೆ ಸರಿ.

4. ನನ್ನ ಕುಟುಂಬದಲ್ಲಿ ಯಾರು ಇಲ್ಲದೆ ಇರುವುದರಿಂದ ನಾನು ಎದುರುದಾರಳು ಹಾಗೂ ಆಕೆಯ ತಂದೆಯೊಂದಿಗೆ ವಾಸಿಸುತ್ತಿದ್ದೆ ಎಂದರೆ ಸರಿಯಲ್ಲ. ಮದುವೆ ಆದ ಮೇಲೆ ನಾವು 6 ತಿಂಗಳ ಕಾಲ ನಮ್ಮ ಚಿಕ್ಕಮ್ಮ ಅವರ ಜೊತೆ ಒಟ್ಟಿಗೆ ಇದ್ದೆವು ನಂತರ ಎದುರುದಾರಳು ಹಾವೇರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ. ನಂತರ ನಾನು ವರ್ಗಾವಣೆ ಮಾಡಿಕೊಂಡು ಎದುರುದಾರಳ ಹಾಗೂ ಆಕೆಯ ತಂದೆ ತಾಯಿಯೊಂದಿಗೆ ಹಾವೇರಿಯಲ್ಲಿ ವಾಸಿಸುತ್ತಿದ್ದೆ. ಹಾವೇರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಾನು ಎಸ್.ಡಿ.ಎ. ಹಾಗೂ ಎದುರುದಾರಳು ಅಸಿಸ್ಟಂಟ್ ಫ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ.

5. ನಾನು ದಿನಾಂಕ 01.04.2014 ರಿಂದ 8 ತಿಂಗಳ ಕಾಲ ಅನಧೀಕೃತ ಗೈರು ಹಾಜರಾಗಿದ್ದೆ ಎಂದರೆ ಸರಿ. ನಾನು ನಮ್ಮ ಕಾಲೇಜಿನ 155 ಜನ ವಿದ್ಯಾರ್ಥಿಗಳ ಮರು ಮೌಲ್ಯಮಾಪನಕ್ಕೆ ಕಟ್ಟಿದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ.

ನನಗೆ ಈ ವಿಷಯಕ್ಕೆ ಕುರಿತಂತೆ ಪ್ರಾಂಶುಪಾಲರಿಂದ ಜ್ಞಾಪನ ಪತ್ರಗಳು ಬಂದಿರುತ್ತವೆ ಎಂದರೆ ಸರಿ. ದಿನಾಂಕ 15.04.2014 ರಿಂದ ಪ್ರಾಂಶುಪಾಲರು ನನಗೆ ಸುಮಾರು ಹತ್ತು ಜ್ಞಾಪನ ಪತ್ರಗಳನ್ನು ನೀಡಿದ್ದು, ನಾನು ಅವುಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರಳು ದಿನಾಂಕ 07.08.2014 ರಂದು ಸದರಿ ಹಣವನ್ನು ಮರುಪಾವತಿ ಮಾಡಿದ್ದು, ನಾನು ಮುಚ್ಚಳಿಕೆ ಪತ್ರ ಬರೆದುಕೊಟ್ಟ ಮೇಲೆ ಕೆಲಸಕ್ಕೆ ಹಾಜರಾಗಿರುತ್ತೇನೆ ಎಂದರೆ ಸರಿ.

6. ನನಗೆ ಕಳುಹಿಸಿರುವ ನೋಟಿಸ್‌ಗಳನ್ನು ಉದ್ದೇಶ ಪೂರ್ವಕವಾಗಿ ತಿರಸ್ಕರಿಸಲು ನಾನು ಪರಿಣಿತನಾಗಿರುತ್ತೇನೆ ಎಂದರೆ ಸರಿಯಲ್ಲ. ಫೆಬ್ರವರಿ 2022 ರಿಂದ ನಾನು ಮತ್ತೆ ಅನಧೀಕೃತವಾಗಿ ಕೆಲಸಕ್ಕೆ ಗೈರು ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ಕಾಲೇಜಿನ ಇತರೆ ಸಿಬ್ಬಂದಿಗಳು ಹಣ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ಮಾತುಕತೆ ನಡೆದಿದ್ದರಿಂದ ನಾನು ಗೈರು ಹಾಜರಾಗಿದ್ದೆ ಎಂದರೆ ಸರಿಯಲ್ಲ. ಸರ್ಕಾರಿ ಕಾಲೇಜಿನಲ್ಲಿ ಮೌಖಿಕವಾಗಿ ರಜೆ ಪಡೆಯಲು ಅವಕಾಶ ಇರುವುದಿಲ್ಲ. ದಿನಾಂಕ 19.02.2022 ರಂದು ನನ್ನನ್ನು ಹಾಗೂ 6 ಜನ ಸಿಬ್ಬಂದಿಗಳನ್ನು ಕಾಲೇಜಿನಿಂದ ಸಸ್ಪೆಂಡ್ ಮಾಡಲಾಗಿತ್ತು ಎಂದರೆ ಸರಿ. ನಮ್ಮ ಮೇಲೆ ಪೋಲಿಸ್ ಪ್ರಕರಣ ದಾಖಲಾಗಿದ್ದು, ನಾನು 6 ನೇ ಆರೋಪಿ ಇದ್ದೆ ಎಂದರೆ ಸರಿ. ಹಣ ದುರ್ಬಳಕೆಯ ಬಗ್ಗೆ ಎಲ್ಲಾ ಪತ್ರಿಕೆಗಳನ್ನು ಸುದ್ದಿ ಪ್ರಕಟವಾಗಿತ್ತು ಎಂದರೆ ಸರಿ. ನಾನು ಗೈರು ಹಾಜರಿದ್ದರು ಕಾಲೇಜಿನ ಸುದ್ದಿಗಳನ್ನು ಪತ್ರಿಕೆಗಳ ಮೂಲಕ ತಿಳಿದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ಪತ್ರಿಕೆ ಓದುವ ಹವ್ಯಾಸ ಇರುತ್ತದೆ. ನಮ್ಮ ವಿರುದ್ಧ 6 ಕೋಟಿ ದುರ್ಬಳಕೆ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ, ಸದರಿ ಪ್ರಕರಣ ಚಾಲ್ತಿಯಲ್ಲಿರುತ್ತದೆ. ದಿನಾಂಕ 26.06.2023 ರಂದು ನಾನು ಮುಚ್ಚಳಿಕೆ ಪತ್ರ ಬರೆದುಕೊಟ್ಟು ಕೆಲಸಕ್ಕೆ ಸೇರಿರುತ್ತೇನೆ. ಈಗ ಕುಶಾಲನಗರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೇನೆ.

7. ಎಂ.ಸಿ.45/2022 ಅರ್ಜಿ ಸಲ್ಲಿಸಿದಾಗ ನಾನು ಹಾಗೂ ಎದುರುದಾರಳು ಹಾವೇರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಎದುರುದಾರಳು ಆಗ ಹಾವೇರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಳು ಹಾಗೂ ಈಗಲೂ ಅಲ್ಲೆ ಕೆಲಸ ಮಾಡುತ್ತಿದ್ದಾಳೆ ಎಂದರ ಸರಿ. ಆ ಸಮಯದಲ್ಲಿ ನಾನು ಅಮಾನತ್ತು ಆಗಿ ಕೆ.ಆರ್.ಪೇಟೆಯಲ್ಲಿ ವಾಸಿಸುತ್ತಿದ್ದೆ. ನಾನು ದಿನಾಂಕ 22.04.2022 ರಂದು ಕೆಲಸದಿಂದ ಅಮಾನತ್ತುಗೊಂಡಿದ್ದೆ. ಎಂ.ಸಿ.45/2022 ರ ನೋಟಿಸ್ ನನಗೆ ಆರ್.ಪಿ.ಎ.ಡಿ ಮೂಲಕ ಹಾವೇರಿ ಇಂಜಿನಿಯರಿಂಗ್ ಕಾಲೇಜಿಗೆ ಕಳುಹಿಸಲಾಗಿತ್ತು ಎಂದರೆ ಅದು ನನಗೆ

ತಲುಪಿರುವುದಿಲ್ಲ. ಹಾವೇರಿ ಹಾಗೂ ಮಂಡ್ಯದ ವಿಜಯವಾಣಿ ವೃತ್ತಪತ್ರಿಕೆಯಲ್ಲಿ ಸದರಿ ಅರ್ಜಿ ದಾಖಲಿಸಿರುವ ಬಗ್ಗೆ ಪ್ರಕಟಣೆಯನ್ನು ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ವಿಚ್ಛೇದನ ಅರ್ಜಿಯ ಬಗ್ಗೆ ನಾನು ನನ್ನ ಸ್ನೇಹಿತಿರಿಂದ ಮಾಹಿತಿ ಪಡೆಯುತ್ತಿದ್ದೆ ಹಾಗೂ ನನಗೆ ಅರ್ಜಿಯ ಮಾಹಿತಿ ಇತ್ತು ಎಂದರೆ ಸರಿಯಲ್ಲ.

8. ಎದುರುದಾರಳು ನ್ಯಾಯಾಲಯದ ಆದೇಶ ಆದ ನಂತರ ದಿನಾಂಕ 16.12.2022 ರಂದು ಇಲಾಖೆ ಪತ್ರ ಬರೆದು ಅಧಿಕೃತವಾಗಿ ವಿಚ್ಛೇದನವಾಗಿರುವುದರಿಂದ ಅವರ ಸೇವಾ ಪುಸ್ತಕದಲ್ಲಿ ನನ್ನ ಹೆಸರನ್ನು ತೆಗೆದು ಅವರ ತಾಯಿಯ ಹೆಸರನ್ನು ಸೇರಿಸಲು ಕೋರಿಕೊಂಡ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಎದುರುದಾರಳು ತನ್ನ ಸೇವಾ ಪುಸ್ತಕದಿಂದ ನನ್ನ ಹೆಸರು ತೆಗೆಸಿರುವ ಮಾಹಿತಿ ನನಗೆ ಇತ್ತು ಎಂದರೆ ಸರಿಯಲ್ಲ. ನಮ್ಮ ಇಲಾಖ ವಿಚಾರಣೆಯಲ್ಲಿ ಎದುರುದಾರಳು ಸಾಕ್ಷಿಯಾಗಿ ಹಾಜರಾದಾಗ ಅವರು ವಿಚ್ಛೇದನ ಪಡೆದ ವಿಷಯ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ.

9. ನಾನು ಒಂದು ಕಾರನ್ನು ಸಾಲ ಪಡೆದು ಖರೀದಿಸಿದ್ದೆ ಅದಕ್ಕೆ ಎದುರುದಾರಳು ಕೋ ಅಬ್ಲಿಗೇಂಟ್ ಆಗಿದ್ದಳು ಎಂದರೆ ಸರಿ. ನಾನು ಸಾಲದ ಕಂತನ್ನು ಪಾವತಿಸದೆ ಇರುವುದರಿಂದ ಎದುರುದಾರಳ ಖಾತೆಯಿಂದ ಹಣ ಕಡಿತಗೊಳಿಸಿ ಬ್ಯಾಂಕಿನವರು ಪತ್ರ ಕಳುಹಿಸಿದ್ದರು ಎಂದರೆ ಸರಿ. ಮಾರ್ಚ್ 2024 ರಿಂದ ಏಪ್ರಿಲ್ 2025 ರವರೆಗೆ ಎದುರುದಾರಳ ಸಾಲದ ಹಣ ನೀಡಿರುವುದನ್ನು ನಾನು ಬ್ಯಾಂಕ್ ಮೂಲಕ ಅವರಿಗೆ ಪ್ರತಿ ತಿಂಗಳು ಐದು ಸಾವಿರ ಹಣ ನೀಡಿ ಮರುಪಾವತಿ ಮಾಡಿರುತ್ತೇನೆ. ದಿನಾಂಕ 07.11.2023 ರಂದು ಎದುರುದಾರಳು ವಿಚ್ಛೇದನ ಆದ ಬಗ್ಗೆ ಹಾಗೂ ಕಾರು ನನ್ನ ಸ್ವಾಧೀನದಲ್ಲಿರುವ ಬಗ್ಗೆ ಬ್ಯಾಂಕ್ ಅಧಿಕಾರಿಗಳಿಗೆ ಪತ್ರ ಬರೆದು ತಿಳಿಸಿದ್ದರು ಅದರ ಮಾಹಿತಿ ನನಗೆ ಇತ್ತು ಎಂದರೆ ಸರಿಯಲ್ಲ. 2024 ರಲ್ಲಿ ಬ್ಯಾಂಕಿನ ಮ್ಯಾನೇಜರ್ ನನಗೆ ಎದುರುದಾರಳ ಖಾತೆಯಿಂದ ಸಾಲದ ಹಣವನ್ನು ಕಡಿತಗೊಳಿಸಿರುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ನಾನು ಸಾಲದ ಹಣವನ್ನು ಮರುಪಾವತಿ ಮಾಡದೆ ಇರುವುದರಿಂದ ಬ್ಯಾಂಕಿನವರು ಎದುರುದಾರಳಿಗೆ ಕಿರುಕುಳ ನೀಡಿರುವುದರಿಂದ ಅವರು ನನ್ನ ಸಂಬಳದ ಮಾಹಿತಿಯನ್ನು ಬ್ಯಾಂಕ್ ಅಧಿಕಾರಿಗಳಿಗೆ ಆರ್.ಟಿ.ಎ ಮುಖಾಂತರ ಪಡೆದು ನೀಡಿದ್ದರು ಎಂದರೆ ಸರಿ.

10. 2024 ರಲ್ಲಿ ಮಗುವಿನ ಕಸ್ಟಡಿ ಕೋರಿ ಅರ್ಜಿ ಸಲ್ಲಿಸಿ ಎದುರುದರಳೊಂದಿಗೆ ಮತ್ತೆ ಸೇರಬೇಕು ಎಂದು ನಾನು ಸದರಿ ಸಾಲದ ಹಣವನ್ನು ಅವರ ಖಾತೆಗೆ ಜಮಾ ಮಾಡಿ ದುರುದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ

19.06.2022 ರಂದು ನನ್ನ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ. ಆಗ ನಾನು ಹಾವೇರಿಯಲ್ಲಿದ್ದೆ ಎಂದರೆ ಸರಿಯಲ್ಲ. ನನಗೆ ಎದುರುದಾರಳು ಸಲ್ಲಿಸಿರುವ ವಿಚ್ಛೇದನ ಅರ್ಜಿಯ ಹಾಗೂ ನ್ಯಾಯಾಲಯದ ಆದೇಶದ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಎದುರುದಾರಳಿಗೆ ನನ್ನಿಂದ ವಿಚ್ಛೇದನ ಅರ್ಜಿಯ ಬಗ್ಗೆ ಮುಚ್ಚಿಡುವ ಅವಶ್ಯಕತೆ ಇರಲಿಲ್ಲ ಆದುದರಿಂದ ಅವರು ಹಾವೇರಿ ಹಾಗೂ ಮಂಡ್ಯ ಜಿಲ್ಲೆಯ ವೃತ್ತ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ್ದರು ಎಂದರೆ ಸರಿಯಲ್ಲ.

11. ಸೆಪ್ಟೆಂಬರ್ 2024 ರಲ್ಲಿ ನನ್ನ ಮಗನನ್ನು ನೋಡಲು ಹಾಸ್ಟಲ್ ಗೆ ಹೋದಾಗ ವಿಚ್ಛೇದನ ವಿಚಾರ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರಳ ತವರುಮನೆ ಚಿತ್ರದುರ್ಗ ಜಿಲ್ಲೆ ಎಂದರೆ ಸರಿ. ಎದುರುದಾರಳು ದುರುದ್ದೇಶ ಪೂರ್ವಕವಾಗಿ ಚಿತ್ರದುರ್ಗ ವಿಳಾಸ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರಳು ಮೋಸದಿಂದ ವಿಚ್ಛೇದನ ಆದೇಶ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಹಾವೇರಿ ಜಿಲ್ಲೆ ವೃತ್ತ ಪತ್ರಿಕೆಯಲ್ಲಿ ಮಾತ್ರ ವಿಚ್ಛೇದನ ಅರ್ಜಿಯ ಬಗ್ಗೆ ಪ್ರಕಟಣೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಎದುರುದಾರಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನೋಟಿಸ್ ಗಳನ್ನು ಉದ್ದೇಶ ಪೂರ್ವಕವಾಗಿ ನಿರಾಕರಿಸುವುದು ನನ್ನ ಹವ್ಯಾಸ ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ